ಸಿಡಬ್ಲ್ಯೂಃ 16 ಪಿಡಬ್ಲ್ಯೂಃ7

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

**ಸಿ.ಸಿ. ಸಂಖ್ಯೆ: 287/2025**

**ಸಾಕ್ಷಿಯನ್ನು ದಿಃ 24.04.2025 ರಂದು ವಿಡಿಯೊ ಕಾನ್ಫರೇನ್ಸ್ ಮೂಲಕ ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 311 ಅಡಿ ಸಲ್ಲಿಸಿದ ಅರ್ಜಿ ಮೇಲಿನ ಆದೇಶದ ಮೇರೆಗೆ ವಿಡಿಯೊ ಕಾನ್ಫರೇನ್ಸ್ ಮೂಲಕ ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್.ಎಂ. ವಕೀಲರಿಂದಃ**

ನಾನು ಯಾವುದೆ ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಯಾವುದೆ ಮಹಜರ್ ಜರುಗಿಸಿಲ್ಲ, ಅದನ್ನು ಠಾಣೆಯಲ್ಲಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಅಮಾನತ್ತು ಮಹಜರ್ ಗಳನ್ನು ಸುಳ್ಳು ಕೇಸ್ ಗೆ ಅನುಗುಣವಾಗಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ಯಾವುದೆ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ, ಅವುಗಳನ್ನು ಈ ಕೇಸ್ ನ ಅನುಕೂಲಕ್ಕಾಗಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಪೋಟೊಗಳಿಗೆ ಸಂಬಂಧಿಸಿದಂತೆ 65 ಬಿ ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅಂತಹ 65 ಬಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರೆ ಕಡತದಲ್ಲಿ ಇರುತ್ತಿತ್ತು ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ನಮ್ಮ ದೋಷಾರೋಪಣಾ ಪಟ್ಟಿಯ ಕಡತದ ಪ್ರಕಾರ ಅಪಘಾತ ಆದ 19 ದಿನಗಳ ನಂತರ ಅಶೋಕ್ ಲೈ-ಲ್ಯಾಂಡ್ ವಾಹನದ ಮಾಲೀಕರಿಗೆ ನೊಟೀಸು ಕೊಟ್ಟು ಉತ್ತರ ಪಡೆದಿರುತ್ತೇನೆ ಎಂದರೆ ಸರಿ. ತಕ್ಷಣವೆ ವಾಹನದ ಮಾಲೀಕರಿಗೆ ನೊಟೀಸು ಕೊಟ್ಟು ಉತ್ತರ ಪಡೆಯಲು ತೊಂದರೆ ಇತ್ತಾ ಎಂದರೆ ಸಿಸಿಟಿವಿ ಪೂಟೇಜ್ ಪರಿಶೀಲಿಸಿ, ಸಾಕ್ಷಿದಾರರ

ಹೇಳಿಕೆ ನಂತರ ಹಾಗೆ ಕೊಡಲಾಗಿದೆ ಎನ್ನುತ್ತಾರೆ. ಆ ಬಗ್ಗೆ ದೋಷಾರೋಪಣಾ ಪಟ್ಟಿಯಲ್ಲಿ ವರದಿ ಮಾಡಿಲ್ಲ. ನನ್ನ ತನಿಖಾ ಕಾಲದಲ್ಲಿ ಆರೋಪಿ ಮೇಲೆ ಸುಳ್ಳು ದೂರು ಬಂದಿದೆ ಎಂದು ಕಂಡು ಬಂದಿದ್ದರು ಸಹ ಮೃತ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ಸಿಗಲಿ ಎಂದು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**ಪಿ.ಐ ಲಷ್ಕರ್ ಪೊಲೀಸ್, ಮೈಸೂರು ನಗರ ರವರು ವಿಡಿಯೊ ಕಾನ್ಫರೇನ್ಸ್ ಮೂಲಕ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ, ಆದ ಕಾರಣ ಸಹಿಯನ್ನು ಪಡೆದುಕೊಂಡಿರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.